**RA No.12/2021**
**P.W-1**

**( ದಿನಾಂಕ.13-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ.B.A.D. ವಕೀಲರಿಂದ

ನನಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ಕೆಳ ನ್ಯಾಯಾಲಯದಲ್ಲಿ ಕೇಸನ್ನು ನಾನೇ ನಡೆಸಿರುತ್ತೇನೆ ಎಂದರೆ ಸರಿ. ಕೆಳ ನ್ಯಾಯಾಲಯದ ತೀರ್ಪು ಆದ ನಂತರ ಎಷ್ಟು ದಿವಸಕ್ಕೆ ಗೊತ್ತಾಗಿರುತ್ತದೆ ನನಗೆ ನೆನಪಿಲ್ಲ. ತೀರ್ಪು ಆದ ನಂತರ ನಾನು ಕರೋನಾ ಇದ್ದ ಸಲುವಾಗಿ ವಕೀಲರನ್ನು ಭೇಟಿಯಾಗಿಲ್ಲ. ಕೆಳ ನ್ಯಾಯಾಲಯ ತೀರ್ಪು ಆಗಿದ್ದರ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ಕೆಳ ನ್ಯಾಯಾಲಯದಲ್ಲಿ ತೀರ್ಪು ಆದ ನಂತರ ಅದರ ಪ್ರತಿಯನ್ನು ಪಡೆಯಲು ಪ್ರಯತ್ನ ಮಾಡಿಲ್ಲ. ಸದರಿ ಮೇಲ್ಮನವಿಯನ್ನು ಸಲ್ಲಿಸಲು ಸುಮಾರು 20-25 ದಿವಸ ತಡವಾಗಿರುತ್ತದೆ. ನಿಖರವಾಗಿ ಎಷ್ಟು ದಿನ ತಡವಾಗಿದೆ ನನಗೆ ಗೊತ್ತಿಲ್ಲ.

ನಾನು ಸಲ್ಲಿಸಿದ ಕಾಲಮಿತಿ ಅಧಿನಿಯಮದ ಅರ್ಜಿಗೆ ಎದುರುದಾರ ಏನಂತ ತಕರಾರು ಹಾಕಿದ್ದಾರೆ ಅಂತ ನಾನು ತಿಳಿದುಕೊಂಡಿಲ್ಲ. ಎಷ್ಟು ದಿವಸ ತಡವಾಗಿದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತನದಿಂದ ಮೇಲ್ಮನವಿ ಸಲ್ಲಿಸಲು ತಡವಾಗಿರುತ್ತದೆ ಎಂದರೆ ಸರಿಯಲ್ಲ.

**RA No.12/2021**

**P.W-1**

ಕೆಳ ನ್ಯಾಯಾಲಯದ ತೀರ್ಪಿನ ಬಗ್ಗೆ ನಾವೇ ಹೋಗಿ ನಮ್ಮ ವಕೀಲರನ್ನು ಭೇಟಿ ಮಾಡಿ ವಿಚಾರಿಸುತ್ತೇನೆ. ತದ ನಂತರ ನಾನು ವಕೀಲರಿಗೆ ತೀರ್ಪಿನ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿ ಅಂತ ವಿನಂತಿಸಿರುತ್ತೇನೆ ಎಂದರೆ ಸರಿ. ತದನಂತರ ನಾನು ನನ್ನ ವಕೀಲರಿಗೆ ಅರ್ಜಿ ಸಲ್ಲಿಸಿರುವ ಹೇಳಿರುವ ಸಮಯದಲ್ಲಿ ಅಪೀಲು ಮಾಡುವ ದಿನ ಮುಗಿದುಹೋಗಿದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ತದನಂತರ 1 ತಿಂಗಳ 9 ದಿನ ನಾನು ನನ್ನ ವಕೀಲರನ್ನು ಭೇಟಿಯಾಗಿಲ್ಲ ಎಂದರೆ ಸರಿ. ನಾನು ನನ್ನ ವಕೀಲರಿಗೆ ಒಂದೇ ಬಾರಿ ನಕಲು ಪ್ರತಿ ಪಡೆಯಲು ವಿನಂತಿಸಿಕೊಂಡಿರುತ್ತೇನೆ. ತೀರ್ಪಿನ ನಕಲು ಪ್ರತಿ ಪಡೆದುಕೊಂಡ ನಂತರ ಕೂಡಾ ನಾನು ಮೇಲ್ಮನವಿ ಸಲ್ಲಿಸಲು ನಿರ್ಲಕ್ಷತನ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಕರೋನಾ ಭಯದಿಂದ ನಾನು ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅತೀರ್ಪಿನ ಪ್ರತಿಯನ್ನು ಪಡೆಯುವ ಸಮಯದಲ್ಲಿ ಮತ್ತು ವಕೀಲರನ್ನು ಭೇಟಿಯಾಗುವ ಸಮಯದಲ್ಲಿ ಕರೋನಾ ಇತ್ತು ಎಂದರೆ ಸರಿ. ಎದುರುದಾರರಿಗೆ ತೊಂದರೆ ಕೊಡಬೇಕೆಂದು ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಒಲ್ಲದ ಮನಸ್ಸಿನಿಂದ ಮತ್ತು ದಕ್ಷತೆಯಿಂದ ಈ ಮೇಲ್ಮನವಿ ಮತ್ತು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**